ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE :

## ಸುಮಾರು 5 ಕೋಟಿಗೂ ಹೆಚ್ಚು ಹಣ ಹಲವರಿಗೆ ಹಂಚಿಕೆ; ಪ್ರಾಥಮಿಕ ತನಿಖೆಯಲ್ಲಿ ಪತ್ತೆ

# ಸಿಡಿ ಪ್ರಕರಣ: ಕಾರು, ಜಮೀನು ಖರೀದಿಗೆ ಮುಂದಾಗಿದ್ದ ಕಿಂಗ್‌ಪಿನ್

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಿಡಿ ಪ್ರಕರಣದಲ್ಲಿ ಕೋಟ್ಯಂತರ ರು. ಹಣ ವ್ಯವಹಾರ ನಡೆದಿರುವ ಬಗ್ಗೆ ಎಸ್‌ಐಟಿ ಅಧಿಕಾರಿಗಳಿಗೆ ಮಾಹಿತಿ ದೊರೆತಿದೆ. ಜತೆಗೆ ಪ್ರಕರಣದ ಕಿಂಗ್‌ಪಿನ್ ಎನ್ನಲಾಗುತ್ತಿರುವ ತುಮಕೂರಿನ ಶಿರಾ ಮೂಲದ ಆರೋಪಿಯು ಸಿಡಿ ಡೀಲಿಂಗ್‌ನಿಂದ ಬಂದಿರುವ ಹಣದಿಂದ ಕಾರು ಹಾಗೂ ಭೂಮಿ ಖರೀದಿಸಲು ಮುಂದಾಗಿದ್ದ ಎನ್ನಲಾಗಿದೆ.

ಸಿಡಿ ಪ್ರಕರಣದಲ್ಲಿ ಸುಮಾರು 5 ಕೋಟಿಗೂ ಹೆಚ್ಚು ಹಣ ಹಲವರಿಗೆ ಹಂಚಿಕೆಯಾಗಿರುವುದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದೆ. ವಿಚಾರಣೆಗೆ ಕರೆತಂದಿದ್ದ ಹಲವಾರು ಖಾಸಗಿ ಸುದ್ದಿ ವಾಹಿನಿಗಳ ವರದಿಗಾರರು ಹಾಗೂ ಕೆಲವು ವ್ಯಕ್ತಿಗಳ ಬ್ಯಾಂಕ್ ಖಾತೆಗಳ ಮೇಲೆ ಎಸ್‌ಐಟಿ ನಿಗಾ ಇಟ್ಟಿದೆ. ಅವರುಗಳ ಖಾತೆಗಳಿಗೆ ಇತ್ತೀಚೆಗೆ ಎಷ್ಟೆಷ್ಟು ಹಣ ಬಂದಿದೆ ಎಂಬುದರ ಬಗ್ಗೆ ಬ್ಯಾಂಕ್ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ. ಈಗಾಗಲೇ ಶಂಕಿತ ವ್ಯಕ್ತಿಗಳ ಮನೆಗಳ ಮೇಲೆ ದಾಳಿ ನಡೆಸಿರುವ ಎಸ್‌ಐಟಿ ಈ ಬಗ್ಗೆ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದೆ. ಸಿಡಿಗಳು ಬಹಿರಂಗಗೊಳ್ಳಲು ಕೋಟ್ಯಂತರ ರು. ಹಣವನ್ನು ಯಾರ್‍ಯಾರು ಕೊಟ್ಟಿದ್ದಾರೆ. ಹಣ ಪಡೆದವರು ಯಾರು? ಎಷ್ಟೆಷ್ಟು ಹಣ ಪಡೆದಿದ್ದಾರೆ ಎಂಬುದರ ಬಗ್ಗೆ ಎಸ್‌ಐಟಿ ಕೂಲಂಕುಶವಾಗಿ ತನಿಖೆ ನಡೆಸುತ್ತಿದೆ. ವಿಚಾರಣೆಗೆ ಒಳಪಡಿಸಿ ಕಳುಹಿಸಿರುವ ವ್ಯಕ್ತಿಯೊಬ್ಬರ ಖಾತೆಗೆ 26 ಲಕ್ಷ ರು. ಹಣ ಸಂದಾಯವಾಗಿದೆ ಎಂಬುದು ತನಿಖೆಯ ವೇಳೆ ಬೆಳಕಿಗೆ ಬಂದಿದೆ ಎನ್ನಲಾಗಿದೆ.



**ಡೀಲ್ ಹಣದಲ್ಲಿ ಕಾರು, ಭೂಮಿ ಖರೀದಿಗೆ ತಯಾರಿ:** ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇಬ್ಬರಿಗಾಗಿ ಎಸ್‌ಐಟಿ ತೀವ್ರ ಶೋಧ ನಡೆಸಿದೆ. ಈ ಪೈಕಿ ಪ್ರಮುಖ ಆರೋಪಿ ಎನ್ನಲಾಗುತ್ತಿರುವ ತುಮಕೂರಿನ ಶಿರಾ ಮೂಲದ ಆರೋಪಿ ಸಿಡಿ ಡೀಲಿಂಗ್‌ನಿಂದ ಬಂದಿರುವ ಹಣದಿಂದ ಕಾರು ಹಾಗೂ ಭೂಮಿ ಖರೀದಿಸಲು ಮುಂದಾಗಿದ್ದ ಎನ್ನಲಾಗಿದೆ. ಮಹೇಂದ್ರ ಕಂಪನಿಯ 2 ಐಷಾರಾಮಿ ಕಾರು ಬುಕ್ ಮಾಡಿದ್ದ. ಒಂದೂವರೆ ಲಕ್ಷ ಮುಂಗಡ ಹಣ ಕೊಟ್ಟು ಮಹೇಂದ್ರ ಎಕ್ಸ್‌ಯುವಿ 500 ಹಾಗೂ 25 ಸಾವಿರ ರುಪಾಯಿ ಮುಂಗಡ ಹಣ ಕೊಟ್ಟು ಥಾರ್ ಜೀಪ್ ಬುಕ್ ಮಾಡಿದ್ದ. ಉಳಿದ ಹಣವನ್ನು ಫುಲ್ ಕ್ಯಾಷ್ ನೀಡಿ ಕಾರು ಪಡೆಯುವುದಾಗಿ ಹೇಳಿದ್ದ. ಪ್ರಕರಣ ಬೆಳಕಿಗೆ ಬರುತ್ತಿದಂತೆ ಬುಕಿಂಗ್ ಕ್ಯಾನ್ಸಲ್ ಮಾಡಿದ್ದಾನೆ. ಮತ್ತೊಂದೆಡೆ ಡೀಲ್ ಹಣದಲ್ಲಿ ಭೂಮಿ ಖರೀದಿಸಲು ಕೊಡಗು, ಮೈಸೂರು ಜಿಲ್ಲೆಗಳಲ್ಲಿ ಮುಂದಾಗಿದ್ದ ಎನ್ನಲಾಗಿದೆ.

**ಎಸ್‌ಐಟಿ ಸಭೆ:** ಸಿಡಿ ಪ್ರಕರಣ ಸಂಬಂಧ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿ ಪ್ರಕರಣ ಎಸ್‌ಐಟಿಗೆ ವರ್ಗಾವಣೆಯಾದ ಬೆನ್ನಲ್ಲೇ ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿ ನೇತೃತ್ವದಲ್ಲಿ, ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್, ಡಿಸಿಪಿ ಅನುಚೇತ್, ಡಿಸಿಪಿ ರವಿಕುಮಾರ್, ಎಸಿಪಿ ಧರ್ಮೇಂದ್ರ, ಇನ್‌ಸ್ಪೆಕ್ಟರ್‌ಗಳು ಸಭೆ ನಡೆಸುತ್ತಿದ್ದಾರೆ. ಮುಂದಿನ ತನಿಖೆ ಬಗ್ಗೆ ಚರ್ಚೆ ಹಾಗೂ ಯುವತಿಯ ವಿಡಿಯೊ ಬಗ್ಗೆಯೂ ಚರ್ಚೆ ನಡೆಸಲಾಗಿದೆ.

**ಮನೆ ಮಾಲೀಕರಿಗೆ ಕ್ಷಮೆ ಕೇಳಿದ ಯುವತಿ:** ಆರ್.ಟಿ.ನಗರದಲ್ಲಿ ವಾಸವಾಗಿದ್ದ ಯುವತಿ ಸಿಡಿ ಬಹಿರಂಗವಾಗುತ್ತಿದ್ದಂತೆ ಅಜ್ಞಾತ ಸ್ಥಳದಲ್ಲಿ ತಲೆಮರೆಸಿಕೊಂಡಿದ್ದರು. ಈ ನಡುವೆ ಮನೆ ಮಾಲೀಕರಿಗೆ ಫೋನ್ ಮಾಡಿ ನನ್ನಿಂದ ನಿಮಗೆ ತೊಂದರೆ ಆಗಿದೆ ಎಂದು ಕ್ಷಮೆ ಕೇಳಿದ್ದಾರೆ.

- ವಿಚಾರಣೆಗೆ ಕರೆಟಿದ್ದ ವರದಿಗಾರರು, ಕೆಲವು ವ್ಯಕ್ತಿಗಳ ಬ್ಯಾಂಕ್ ಖಾತೆಗಳ ಮೇಲೆ ಎಸ್‌ಐಟಿ ನಿಗಾ
- ಶಂಕಿತ ವ್ಯಕ್ತಿಗಳ ಮನೆಗಳ ಮೇಲೆ ದಾಳಿ ನಡೆಸಿರುವ ಎಸ್‌ಐಟಿ, ಹಲವು ದಾಖಲೆ ವಶಕ್ಕೆ
- ಹಣ ಯಾರ್‍ಯಾರು ಕೊಟ್ಟಿದ್ದಾರೆ? ಹಣ ಪಡೆದವರು ಯಾರು? ಎಷ್ಟೆಷ್ಟು ಹಣ ಪಡೆದಿದ್ದಾರೆ ಎಂಬುದರ ಬಗ್ಗೆ ಕೂಲಂಕುಶವಾಗಿ ತನಿಖೆ
- ಪ್ರಮುಖ ಆರೋಪಿಯಿಂದ ಮಹೇಂದ್ರ ಕಂಪನಿಯ 2 ಐಷಾರಾಮಿ ಕಾರು ಬುಕ್, ಕೊಡಗು, ಮೈಸೂರು ಜಿಲ್ಲೆಗಳಲ್ಲಿ ಭೂಮಿ ಖರೀದಿಸಲು ಮುಂದಾಗಿದ್ದ



ಸಿಡಿ ಪ್ರಕರಣದಲ್ಲಿ ಯುವತಿಗೆ ಯಾರಿಂದ ರಕ್ಷಣೆ ಸಿಗಬೇಕೋ ಅದು ಸಿಕ್ಕಿದೆ. ಯುವತಿಯ ವಿಡಿಯೊ ದಿಢೀರನೆ ಸಾಮಾಜಿಕ ಜಾಲತಾಣಗಳಲ್ಲಿ ಅಪ್ ಲೋಡ್ ಮಾಡಿದ್ದಾರೆ. ಆದರೆ, ಈವರೆಗೆ ಅವರಿಗೆ ಯಾರು ರಕ್ಷಣೆ ನೀಡಿದ್ದರು.

**- ಎಚ್.ಡಿ.ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ**



ಸಿಡಿ ನಕಲಿ ಎಂದು ಹೇಳುತ್ತಿದ್ದವರು, ಈಗ ಅದರ ಕುರಿತ ತನಿಖೆಗೆ ದೂರು ನೀಡಿದ್ದಾರೆ. ಖುದ್ದು ಯುವತಿಯೇ ಬಂದು ಹೇಳಿಕೆ ನೀಡಿದ್ದಾಗಿದೆ. ಈ ಪ್ರಕರಣ ಇನ್ನೂ ಯಾವ ತಿರುವು ಪಡೆದುಕೊಳ್ಳಲಿದೆ ಎಂಬುದನ್ನು ಕಾದು ನೋಡುತ್ತೇವೆ.

**- ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

## ಆತನ ಪಾತ್ರ ಇಲ್ಲ

ಸಿಡಿ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತನಿಗೆ ಸಿಡಿ ತಲುಪಿಸಿದ್ದ ಎಂಬ ಆರೋಪದ ಮೇರೆಗೆ ವಿಚಾರಣೆಗೆ ಒಳಗಾಗಿದ್ದ ನಾಲ್ವರು ಖಾಸಗಿ ಟಿ.ವಿ ವರದಿಗಾರರ ಪೈಕಿ ಒಬ್ಬನ ಪಾತ್ರ ಏನು ಇಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಪ್ರಕರಣದ ಎಸ್‌ಐಟಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಖಾಸಗಿ ವಾಹಿನಿಯಲ್ಲಿ ವರದಿಗಾರನಾಗಿದ್ದ ವಿಜಯನಗರ ನಿವಾಸಿಯಾದ ಯುವಕನಿಗೆ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಸಂಪರ್ಕ ಇರುವುದು ನಿಜ. ಈ ಹಿಂದೆ ಯುವಕ ರಾಮನಗರದಲ್ಲಿ ಕೆಲಸ ಮಾಡಿದ್ದಾನೆ. ಅಂದಿನಿಂದಲೂ ದಿನೇಶ್ ಅವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದ ಎಂಬ ಕಾರಣಕ್ಕೆ ನೋಟಿಸ್ ನೀಡಲಾಗಿತ್ತು.

## ಸಿಡಿ ಲೇಡಿಗೆ ನೋಟಿಸ್

ವಿಜಯಪುರ: ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಸಂತ್ರಸ್ತ ಯುವತಿ ಮನೆಯ ಬಾಗಿಲಿಗೆ ಬೆಂಗಳೂರಿನ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ನೋಟಿಸ್ ಅಂಟಿಸಿದ್ದಾರೆ. ಮನೆಗೆ ಬೀಗ ಹಾಕಿದ್ದು, ನೋಟಿಸ್ ಅನ್ನು ಬಾಗಿಲಿಗೆ ಅಂಟಿಸಿದ್ದಾರೆ. ದಿನೇಶ್ ಕಲ್ಲಹಳ್ಳಿ ದಾಖಲಿಸಿದ್ದ ದೂರಿನ ವಿಚಾರಣೆ ಚಾಲ್ತಿಯಲಿದ್ದು, ಈ ಬಗ್ಗೆ ನಿಮ್ಮ ಹೇಳಿಕೆ ಪಡೆಯಬೇಕಾಗಿರುವುದರಿಂದ ನೋಟಿಸ್ ನೋಡಿದ ಕೂಡಲೇ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಪೊಲೀಸ್ ಅಧಿಕಾರಿ ಮೊಬೈಲ್ ಸಂಖ್ಯೆಗೆ ಕರೆ ಮಾಡುವಂತೆ ಸೂಚಿಸಲಾಗಿದೆ.